ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ಬಂದಿದೆ.

ಆ) ವಿಷಯವನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಇ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

304(453) ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಬೊಮ್ಮನಹಳ್ಳಿ ಸಿ.ಎಂ.ಸಿ.ಯ ಅಡಿಯಲ್ಲಿ ರಸ್ತೆ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು :

ಆ) ಬೊಮ್ಮನಹಳ್ಳಿ ಸಿ.ಎಂ.ಸಿ. ಅಡಿಯಲ್ಲಿ ಹಾದು ಹೋಗುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ರಸ್ತೆ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ;

ಇ) ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು ;

ಈ) ಬೊಮ್ಮನಹಳ್ಳಿ ಸಿ.ಎಂ.ಸಿ.ಯಲ್ಲಿ ಸೌತ್ ಸಿಟಿಯಲ್ಲಿ ಎಲ್.ಎನ್.ಟಿ. ರವರು ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬೊಮ್ಮನಹಳ್ಳಿ ನಗರಸಭೆಯಲ್ಲಿ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ 392.50 ಲಕ್ಷ ರೂ.ಗಳ ಅಂದಾಜುಗಳನ್ನು ತಯಾರಿಸಿದ್ದು, ಟೆಂಡರುಗಳನ್ನು ಸಹ ಕರೆಯಲಾಗಿದೆ. ಸದರಿ ಅಂದಾಜು ಮೊತ್ತದ ಅನುಷ್ಠಾನಕ್ಕಾಗಿ ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಹಣಕಾಸು ಸಂಸ್ಥೆಯ ತೆರವಿಗಾಗಿ ಪ್ರಸ್ತಾಪಿಸಲಾಗಿದೆ. ಹಣಕಾಸು ನೆರವು ಮಂಜೂರಾದ ತಕ್ಷಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು .

ಆ) ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

305(457) ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮದಗ ಮಾಸೂರು ಪ್ರಸಿದ್ಧಿ ಕೆರೆಯ ಅತಿಕ್ರಮಣ ಹಾಗೂ ಅರ್ಧದಷ್ಟು ಹೂಳು ತುಂಬಿರುವುದರ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಆ) ಕೆರೆಯ ಕೋಡಿಯನ್ನು ಮೊದಲಿದ್ದದ್ದಕ್ಕಿಂತಲೂ ಒಂದೂವರೆ ಅಡಿ ಕಡಿಮೆ ಮಾಡಿ ನೀರು ಸೋರಿ ಹೋಗುವಂತೆ ಮಾಡಿದ್ದರ ಉದ್ದೇಶವೇನು ?

ಇ) ಈ ಕೆರೆಯ ಸಂಪರ್ಕ ಕಾಲುವೆಗಳ ದುರಸ್ತಿಗೆ ತೆಗೆದುಕೊಂಡ ಕ್ರಮವೇನು ?

ಈ) ತುಂಗಾ ಮೇಲ್ದಂಡೆ ಯೋಜನಾ ವಿಭಾಗದಲ್ಲಿ ಹಿರೇಕೆರೂರು ತಾಲ್ಲೂಕಿನ ಸಂಪೂರ್ಣ ಕಾಮಗಾರಿ ಯಾವ ಸಾಲಿನಲ್ಲಿ ಪೂರ್ಣಗೊಳ್ಳಲಿದೆ ?